# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಡಾ:ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 300**

**ಉತ್ತರಿಸಬೇಕಾದ ದಿನಾಂಕ : 12.08.2025**

**ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ/ಗ್ರಾಮಾಂತರ ಹಾಗೂ ರಾಮನಗರ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದಿಂದ ಚೆನ್ನೈ ಮಾರುಕಟ್ಟೆಗೆ ಹಾಲು ಪೂರೈಸುವ ಹೆಸರಿನಲ್ಲಿ ಸುಮಾರು 21 ಕೋಟಿ ರೂ. ಅಕ್ರಮ ನಡೆದಿರುವುದು ನಿಜವೇ: | ಕರ್ನಾಟಕ ಹಾಲು ಮಹಾಮಂಡಳದ ಅಧೀನದ ಫೆಡರಲ್ ಮಾದರಿಯ ವ್ಯವಸ್ಥೆಯಲ್ಲಿ ಕರ್ನಾಟಕದಾದ್ಯಂತ 16 ಒಕ್ಕೂಟ/ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ ಬೆಂಗಳೂರು ಹಾಲು ಒಕ್ಕೂಟವು ಸಹ ಒಂದಾಗಿರುತ್ತದೆ. ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಪ್ರಚಾರ ಮತ್ತು ಮಾರಾಟ ಅಭಿವೃದ್ಧಿಗಾಗಿ ಕರ್ನಾಟಕ ಹಾಲು ಮಹಾಮಂಡಳಿಯು ತಮಿಳುನಾಡು ರಾಜ್ಯದ ಚೆನ್ನೈ ನಗರದಲ್ಲಿ 2014-15ನೇ ಸಾಲಿನಿಂದಲೂ ಒಕ್ಕೂಟದಿಂದ Warehouse Clearing & Forwarding ಗಳನ್ನು ನೇಮಕ ಮಾಡಿಕೊಂಡು ಕಹಾಮ ನಿಗದಿಪಡಿಸಿರುವ ಮಾರ್ಜಿನ್ ಮತ್ತು ಮಾರಾಟ ದರದಂತೆ ಹಾಲು ಮತ್ತು ಮೊಸರು ಮಾರಾಟ ಮಾಡಲಾಗಿರುತ್ತದೆ. ಒಕ್ಕೂಟದಿಂದ 2019-20ನೇ ಸಾಲಿನಲ್ಲಿ ಚೆನ್ನೈನ ಆರ್.ಕೆ.ಆರ್. ಡೈರಿಯಲ್ಲಿ ಹೆಚ್ಚಿನ ಹಾಲು ಸಂಸ್ಕರಣೆ ಮತ್ತು ಪ್ಯಾಕಿಂಗ್ ಸೌಲಭ್ಯವಿದ್ದುದ್ದರಿಂದ ಹಾಲಿನ ಕೋ ಪ್ಯಾಕಿಂಗ್ ಹಾಗೂ ಹಾಲಿನ ಮಾರುಕಟ್ಟೆಗೆ ಒಕ್ಕೂಟದಿಂದ ವ್ಯವಸ್ಥೆ ಮಾಡಲಾಗಿರುತ್ತದೆ. 2020ರ ಫೆಬ್ರವರಿ ಮಾಹೆಯಿಂದ ಹಾಲಿನ ಮಾರಾಟವನ್ನು ಸ್ಥಗಿತಗೊಳಿಸಲಾಗಿರುತ್ತದೆ. ಆರ್.ಕೆ.ಆರ್. ಡೈರಿ ನೀಡಿದ್ದ ಮುಂಗಡಗಳ ಹೊಂದಾಣಿಕೆ ನಂತರ ಅಂತಿಮವಾಗಿ ಒಕ್ಕೂಟಕ್ಕೆ ಆರ್.ಕೆ.ಆರ್. ಡೈರಿಯಿಂದ ಬರಬೇಕಾದ ಹಾಲು ಮಾರಾಟದ ಬಾಬ್ತು ರೂ.1,50,24,563/- ಗಳು ಬಾಕಿ ಇರುತ್ತದೆ. ಆರ್.ಕೆ.ಆರ್. ಡೈರಿಗೆ ಬಾಕಿ ಮೊತ್ತ ಪಾವತಿಗಾಗಿ ಮತ್ತು ಅವರು ನೀಡಿದ್ದ ಬ್ಯಾಂಕ್ ಗ್ಯಾರಂಟಿ ಮುಟ್ಟುಗೋಲು ಮಾಡಿಕೊಳ್ಳಲು ನೋಟಿಸ್ ನೀಡಲಾಗಿರುತ್ತದೆ. ಆರ್.ಕೆ.ಆರ್. ಡೈರಿಯು ಬಾಕಿ ಮೊತ್ತ ಪಾವತಿಸದೇ ಇರುವುದರಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ (ದಾವೆ ಸಂಖ್ಯೆ: AC No.642/2023) ಹೂಡಲಾಗಿರುತ್ತದೆ. ಆರ್.ಕೆ.ಆರ್. ಡೈರಿಯವರು ಬ್ಯಾಂಕ್ ಗ್ಯಾರಂಟಿ ಮುಟ್ಟುಗೋಲು ಹಾಕಿಕೊಳ್ಳುವ ನೋಟಿಸ್ ವಿರುದ್ಧ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ದಾವೆ (ದಾವೆ ಸಂಖ್ಯೆ:AA5/2020) ಹೂಡಿದ್ದರು. ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಒಕ್ಕೂಟದ ಪರವಾಗಿ ತೀರ್ಮಾನವಾಗಿದ್ದರಿಂದ ಬ್ಯಾಂಕ್ ಗ್ಯಾರಂಟಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ.<br><br>ಮಾನ್ಯ ಉಚ್ಚನ್ಯಾಯಾಲವು ಈ ಪ್ರಕರಣವನ್ನು ಮಧ್ಯಸ್ಥಿಕೆ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿರುತ್ತದೆ. ಆರ್.ಕೆ.ಆರ್. ಡೈರಿಯು ಒಕ್ಕೂಟದಿಂದ ಹಾಲಿನ ಮಾರಾಟ ಅಭಿವೃದ್ಧಿಗಾಗಿ |

| | | |
|---|---|---|
| | | ನೀಡುವ ಪ್ರೋತ್ಸಾಹಧನ ಪಾವತಿ ಮಾಡಿಲ್ಲವೆಂದು ಮದ್ಯಸ್ಥಿಕೆ ನ್ಯಾಯಾಲಯದಲ್ಲಿ ವಾದ ಮಂಡಿಸಿರುತ್ತಾರೆ. ಪ್ರಕರಣವು ಮಧ್ಯಸ್ಥಿಕೆ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುತ್ತದೆ. ಇದರಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ.<br><br>ಒಕ್ಕೂಟವು ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64 ರಡಿ ವಿಚಾರಣೆ ನಡೆಸಿ, ಆರ್.ಕೆ.ಆರ್ ಡೈರಿಯಿಂದ ಹಾಲು ಮಾರಾಟಕ್ಕೆ ಸಂಬಂಧಿಸಿದಂತೆ ಒಕ್ಕೂಟಕ್ಕೆ ಬರಬೇಕಾದ ಬಾಕಿ ಮೊತ್ತ ರೂ.1,50,24,563/- ಗಳನ್ನು ವಸೂಲು ಮಾಡುವಂತೆ ಸೂಚಿಸಿರುತ್ತಾರೆ.<br><br>ಒಕ್ಕೂಟದ ಈ ಪ್ರಕರಣವು ಮಧ್ಯಸ್ಥಿಕೆ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದು, ನ್ಯಾಯಾಲಯದ ತೀರ್ಪಿನಂತೆ ಒಕ್ಕೂಟದಿಂದ ವಸೂಲಾತಿಗೆ ಕ್ರಮವಿಡಲಾಗುವುದು. |
| ಆ) | ಬೇರೆ ರಾಜ್ಯಗಳಿಗೆ ಹಾಲು ಪೂರೈಸಲು ಸರ್ಕಾರ ನಿಯಮಗಳನ್ನು ರೂಪಿಸಿದೆಯೇ: ರೂಪಿಸಿದ್ದಲ್ಲಿ, ನಿಯಮದ ಪ್ರತಿಯನ್ನು ನೀಡುವುದು; | ಬೇರೆ ರಾಜ್ಯಗಳಿಗೆ ಹಾಲು ಪೂರೈಸಲು ಸರ್ಕಾರವು ಯಾವುದೇ ನಿಯಮವನ್ನು ರೂಪಿಸಿರುವುದಿಲ್ಲ. |
| ಇ) | ಒಕ್ಕೂಟದಿಂದ ಪ್ರತಿ ಟ್ಯಾಂಕರ್ ಗಳಲ್ಲಿ ಚೆನ್ನೈಗೆ ಹಾಲನ್ನು ನೀಡಲಾಗುತ್ತಿದ್ದು ಆರ್.ಕೆ.ಆರ್. ಡೈರಿ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಈ ಹಾಲನ್ನು ಪ್ಯಾಕಿಂಗ್ ಮಾಡಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | 2019-20 ನೇ ಸಾಲಿನಲ್ಲಿ ಬೆಂಗಳೂರು ಹಾಲು ಒಕ್ಕೂಟದಿಂದ ಆರ್.ಕೆ.ಆರ್. ಡೈರಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ರವರ ಹಾಲು ಪ್ಯಾಕಿಂಗ್ ಸಾಮರ್ಥ್ಯವನ್ನು ಗುರುತಿಸಿ, ಕೋ ಪ್ಯಾಕಿಂಗ್ ಕರಾರು ಒಪ್ಪಂದ ಮಾಡಿಕೊಂಡು, ಕರಾರು ಒಪ್ಪಂದದ ನಿಯಮಗಳನ್ವಯ ಆರ್.ಕೆ.ಆರ್. ಡೈರಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಹಾಲು ಸರಬರಾಜು ಮಾಡಿ ಅಲ್ಲಿನ ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ಕೋ ಪ್ಯಾಕಿಂಗ್ ಮಾಡಿಸಿ, ಚೆನ್ನೈನಲ್ಲಿ ಮಾರಾಟ ಮಾಡಲಾಗಿರುತ್ತದೆ. ದಿನಾಂಕ:29.02.2020 ರಿಂದ ಆರ್.ಕೆ.ಆರ್. ಡೈರಿ ಪ್ರಾಡಕ್ಟ್ಸ್ ಲಿ. ರವರಿಗೆ ಹಾಲು ಸರಬರಾಜು ಮಾಡುವುದನ್ನು ಸ್ಥಗಿತಗೊಳಿಸಿ, ಕರ್ನಾಟಕ ಹಾಲು ಮಹಾಮಂಡಳಿಯ ನಿರ್ದೇಶನದಂತೆ ದಿನಾಂಕ:01.03.2020 ರಿಂದ ಮೈಸೂರು ಹಾಲು ಒಕ್ಕೂಟಕ್ಕೆ ಹಸ್ತಾಂತರಿಸಲಾಗಿರುತ್ತದೆ. |
| ಈ) | ಹಾಗಿದ್ದಲ್ಲಿ, ಚೆನ್ನೈಗೆ ನೀಡಲಾಗುತ್ತಿರುವ ಹಾಲಿಗೆ ನಿಗಧಿಪಡಿಸಿರುವ ದರ ಎಷ್ಟು; ಪ್ರಸ್ತುತ ಚೆನ್ನೈನಲ್ಲಿ ಇರುವ ಹಾಲಿನ ದರ ಎಷ್ಟು? | 2019-20ನೇ ಸಾಲಿನಲ್ಲಿ ಚೆನ್ನೈನಲ್ಲಿ ಮಾರಾಟವಾಗುತ್ತಿದ್ದ ಹಾಲಿನ ಮಾರಾಟ ದರದ ವಿವರ:<br><br>1. ಹೋಮೋಜಿನೈಸ್ಡ್ ಹಾಲು ರೂ.48/-<br>2. ಸ್ಟ್ಯಾಂಡರ್ಡೈಸ್ಡ್ ಹಾಲು ರೂ.53/-<br>3. ಸಮೃದ್ಧಿ ಹಾಲು ರೂ.59/-<br>4. ಮೊಸರು ರೂ.58/- |

| | | |
|---|---|---|
| | | ಮೈಸೂರು ಹಾಲು ಒಕ್ಕೂಟದಿಂದ ಆರ್.ಕೆ.ಆರ್. ಡೈರಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ಹಾಲನ್ನು ರವಾನಿಸಿ ಕೋ ಪ್ಯಾಕಿಂಗ್ ಮಾಡಿಸಿ, ಚೆನ್ನೈ ನಗರದಲ್ಲಿ ಮಾರಾಟ ಮಾಡಲಾಗುತ್ತಿರುವ ಹಾಲಿನ ಮಾರಾಟದ ದರದ ವಿವರ:<br>1.ಹೋಮೋಜಿನೈಸ್ಡ್ ಹಾಲು ರೂ.53/-<br>2. ಸ್ಟ್ಯಾಂಡರ್ಡೈಸ್ಡ್ ಹಾಲು ರೂ.61/-<br>3. ಸಮೃದ್ಧಿ ಹಾಲು ರೂ.67/-<br>4. ಮೊಸರು ರೂ.68/- |

**ಕಡತ ಸಂಖ್ಯೆ: ಸಿಒ 130 ಸಿಸಿಬಿ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ